ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

*ಸಂಖ್ಯೆ:–ಕ.ಸಂ.ವಿ/ ಪರೀಕ್ಷಾಂಗ/ ಅಷ್ಟಮ ದೀಕ್ಷಾಂತ ಘಟಿಕೋತ್ಸವ/2019–20* *ದಿನಾಂಕ:–05–02–2020*

# ಅಧಿಸೂಚನೆ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಷ್ಟಮ ದೀಕ್ಷಾಂತ ಘಟಿಕೋತ್ಸವವನ್ನು ನಡೆಸಲು ನಿಶ್ಚಯಿಸಲಾಗಿದೆ. ಆದ ಕಾರಣ 2018–19 ನೇ ಸಾಲಿನಲ್ಲಿ ಬಿ.ಎ ಶಾಸ್ತ್ರಿ (ವಿದ್ವನ್ಮಧ್ಯಮಾ) ಹಾಗೂ ಎಂ.ಎ. ಆಚಾರ್ಯ, ಸಂಸ್ಕೃತ/ವೇದ (ವಿದ್ವದುತ್ತಮಾ) ಅಂತಿಮ ವರ್ಷದಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಮತ್ತು ಎಂ.ಫಿಲ್ (ವಿಶಿಷ್ಟಾಚಾರ್ಯ) ಪಿ.ಹೆಚ್.ಡಿ (ವಿದ್ಯಾವಾರಿಧಿ) ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಿಂದ ಅರ್ಜಿಯನ್ನು ಪಡೆದು 500/– ರೂ.ಗಳ ಶುಲ್ಕವನ್ನು ಮತ್ತು 2018–19 ನೇ ಸಾಲಿಗಿಂತ ಪೂರ್ವದಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು 600/– ರೂ.ಗಳ ನಿಗಧಿತ ಶುಲ್ಕವನ್ನು **"FINANCE OFFICER, EXAM SECTION KSU, BANGALORE-18"** ಇವರ ಹೆಸರಿಗೆ ಡಿ.ಡಿ ರೂಪದಲ್ಲಿ ಪಾವತಿಸಬೇಕು ಹಾಗೂ ಭರ್ತಿ ಮಾಡಿದ ನಿಗದಿತ ಅರ್ಜಿಗಳನ್ನು ಲಗತ್ತುಗಳ ಜೊತೆಗೆ ತಮ್ಮ ಕಾಲೇಜಿನ ಪ್ರಾಚಾರ್ಯರಿಂದ ದೃಢೀಕರಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು.

ಸ್ನಾತಕ ಪದವಿಗಾಗಿ ಅರ್ಜಿಯನ್ನು ಸಲ್ಲಿಸುವವರು ಬಿ.ಎ. ಮೂರು ವರ್ಷದ ಅಂಕಪತ್ರಗಳ ನಕಲು ಪ್ರತಿಗಳನ್ನು ಲಗತ್ತಿಸಬೇಕು. (ಅಂಕಪಟ್ಟಿಗಳು ಲಭ್ಯವಿಲ್ಲದಿದ್ದಲ್ಲಿ ದೃಢೀಕೃತ ಫಲಿತಾಂಶ ಪಟ್ಟಿಯನ್ನು ಲಗತ್ತಿಸುವುದು.) ಸ್ನಾತಕೋತ್ತರ ಪದವಿಗಾಗಿ ಅರ್ಜಿ ಸಲ್ಲಿಸುವವರು ಎಂ.ಎ ಎರಡು ವರ್ಷದ ಅಂಕಪತ್ರಗಳ ನಕಲು ಪ್ರತಿಗಳನ್ನು ಲಗತ್ತಿಸಬೇಕು. (ಅಂಕಪಟ್ಟಿಗಳು ಲಭ್ಯವಿಲ್ಲದಿದ್ದಲ್ಲಿ ದೃಢೀಕೃತ ಫಲಿತಾಂಶ ಪಟ್ಟಿಯನ್ನು ಲಗತ್ತಿಸುವುದು.) ತಮ್ಮ ಕಾಲೇಜಿನ ಪ್ರಾಚಾರ್ಯರಿಂದ ದೃಢೀಕರಿಸದ & ಅಗತ್ಯವಾದ ಲಗತ್ತುಗಳು ಇಲ್ಲದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ನಿಗದಿತ ಅರ್ಜಿಗಳನ್ನು ವಿಶ್ವವಿದ್ಯಾಲಯದ http://ksu.ac.in/en/academics/forms/ ವೆಬ್‌ಸೈಟ್ ಲಿಂಕ್‌ನಿಂದ ಪಡೆಯತಕ್ಕದ್ದು.

**ವಿಶ್ವವಿದ್ಯಾಲಯಕ್ಕೆ ಅರ್ಜಿಗಳನ್ನು ಡಿ.ಡಿಯ ಜೊತೆಗೆ ಸಲ್ಲಿಸುವ ದಿನಾಂಕ:–05/03/2020** &
**ವಿಶ್ವವಿದ್ಯಾಲಯಕ್ಕೆ ಅರ್ಜಿಗಳನ್ನು ವಿಳಂಬ ಶುಲ್ಕ 100 ರೂ ಗಳೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ:–10/03/2020**

Sd/-
**ಕುಲಸಚಿವರು**

**ಪ್ರತಿಗಳು:**

1. ನಿರ್ದೇಶಕರು, ಅಧ್ಯಯನಾಂಗ, ಕ.ಸಂ.ವಿ. ಬೆಂಗಳೂರು.
2. ರಾಜ್ಯದ ಎಲ್ಲಾ ಸಂಸ್ಕೃತ ಕಾಲೇಜುಗಳ ಪ್ರಾಚಾರ್ಯರಿಗೆ.
3. ಕಛೇರಿ ಪ್ರತಿ.